

## ಟ್ರ್ಯಾಕ್ಟರ್‌ಗೆ ಎತ್ತಿನಗಾಡಿ ಎಳೆಯುವ ಯೋಗ!

ಹಿಂದೊಮ್ಮೆ ಎಲ್ಲ ರೈತರು ಎತ್ತಿನಗಾಡಿಯನ್ನು ಮದುವೆ, ಮುಂಜಿ, ಮತ್ತು ಸಾರಿಗೆಗೆ ಬಳಸುತ್ತಿದ್ದರು. ಕ್ರಮೇಣ ಎತ್ತುಗಳು, ಎತ್ತಿನಗಾಡಿಗಳ ಸಂಖ್ಯೆ ಕ್ಷೀಣಿಸಿದಂತೆ ಆ ಜಾಗಕ್ಕೆ ಯಂತ್ರೋಪಕರಣಗಳು ಬಂದವು. ಅದಕ್ಕೆಲ್ಲ ಕಾರಣ ಆಧುನಿಕತೆ, ಸಮಯದ ಕೊರತೆ ಮತ್ತು ಯಂತ್ರಗಳ ಹಾವಳಿ.

ಆದರೆ ಉತ್ತರಕನ್ನಡದ ಸಿದ್ಧಾಪುರ ತಾಲ್ಲೂಕಿನ ರೈತರೊಬ್ಬರು ತಮ್ಮ ಟ್ರ್ಯಾಕ್ಟರ್‌ಗೆ ಎತ್ತಿನಗಾಡಿಯನ್ನು ಜೋಡಣೆ ಮಾಡಿ ತಮ್ಮ ಹಸುಗಳಿಗೆ ಹಸಿಹುಲ್ಲನ್ನು ಹೊಲದಿಂದ ಮನೆಗೆ ತರಲು ಮತ್ತು ಇತರೆ ಸಾರಿಗೆ ಕೆಲಸಗಳಿಗೆ ಬಳಸುತ್ತಿದ್ದಾರೆ. ಅವರ ಪ್ರಕಾರ, ‘ಮಲೆನಾಡಿನಲ್ಲಿ ಮಳೆಗಾಲದಲ್ಲಿ ಮಣ್ಣು ರಸ್ತೆಯಲ್ಲಿ ಟ್ರ್ಯಾಕ್ಟರ್ ಟ್ರಾಲಿಯ ಬಳಕೆ ಕಷ್ಟಕರ. ಟ್ರಾಲಿಯ ಭಾರದಿಂದ ಕೆಸರಿನಲ್ಲಿ ಚಕ್ರಗಳು ಹೂತಿಕೊಳ್ಳುವ ಸಾಧ್ಯತೆ ಹೆಚ್ಚು. ಹೀಗಾಗಿ ಈ ಮಾದರಿ ಅಳವಡಿಸಿಕೊಳ್ಳಲಾಗಿದೆ’ ಅಂತೆ.

—ಪಿ.ಹೆಚ್. ಪಾಟೀಲ್, ರಾಣೆಬೆನ್ನೂರ

## ಶಾರದೆಗೆ ಸ್ವರ್ಣ ವೀಣೆ ಸಮರ್ಪಣೆ!

ಮಂಗಳೂರಿನ ರಥಬೀದಿಯ ವೆಂಕಟರಮಣ ದೇವಸ್ಥಾನದ ಆಚಾರ್ಯ ಮಠದಲ್ಲಿ ನಡೆಯುವ ಶಾರದೋತ್ಸವಕ್ಕೆ ಈ ಬಾರಿ ಶತಮಾನೋತ್ಸವದ ಸಂಭ್ರಮ! ಅಪೂರ್ವ ಪರಂಪರೆಯುಳ್ಳ ಈ ಉತ್ಸವದಲ್ಲಿ ಶಾರದಾಂಬೆಗೆ ಇಲ್ಲಿನ ಭಕ್ತರು ಮಿರಮಿರ ಮಿಂಚುವ ಚಿನ್ನದ ವೀಣೆಯೊಂದಿಗೆ ಸುವರ್ಣ ನವಿಲನ್ನು ಅರ್ಪಿಸಿ ಉತ್ಸವಕ್ಕೆ ವಿಶೇಷ ಮೆರಗು ನೀಡಿದ್ದಾರೆ. ವೀಣಾಪಾಣಿಯಾಗಿರುವ ಶಾರದಾ ಮಾತೆಗೆ ಸಮರ್ಪಿಸಲಾದ ಈ ಚಿನ್ನದ ಕೊಡುಗೆಗಳನ್ನು ಭವ್ಯ ಮೆರವಣಿಗೆಯ ಮೂಲಕ ದೇವಸ್ಥಾನಕ್ಕೆ ಒಪ್ಪಿಸಲಾಯಿತು. ಅತ್ಯಾಕರ್ಷಕ ಶೈಲಿಯ ಚಿನ್ನದ ವೀಣೆ ಹಾಗೂ ನವಿಲು ಭಕ್ತರೆಲ್ಲರ ವಿಶೇಷ ಆಕರ್ಷಣೆಗೆ ಕಾರಣವಾಯಿತು.

—ಸತೀಶ್ ಶೆಟ್ಟಿ, ಕೊಡಿಯಾಲ್‌ಬೈಲ್



## ಹಳೆ ಬಟ್ಟೆಗೆ ಹೊಸ ಕಾರ್ಪೆಟ್!

‘ಹಳೆ ಪಾತ್ರೆ, ಹಳೆ ಕಬ್ಬಿಣ, ಹಳೆ ಪೇಪರ್’ ಎಂಬ ಹಾಡಿನ ಬದಲಿಗೆ ಈಗೀಗ ಬಡಾವಣೆಗಳಲ್ಲಿ ‘ಹಳೆ ಸೀರೆ, ಹಳೆ ಪ್ಯಾಂಟ್ ಇದ್ರೆ ಕೊಡ್ರಿ... ಹೊಸ ಜಮುಖಾನೆ, ಹೊಸ ಕಾರ್ಪೆಟ್ ಕೊಡ್ತೀವಿ’ ಅನ್ನುವ ಧ್ವನಿ ಕೇಳುತ್ತಿದೆ. ಈ ಥರಾ ಮೈಕ್ ಹಾಕಿಕೊಂಡು ಬರುತ್ತಿದ್ದ ಉತ್ತರಪ್ರದೇಶ ಮೂಲದ ವ್ಯಕ್ತಿಯನ್ನು ತಡೆದು ವಿಚಾರಿಸಿದಾಗ, ‘ಮೇಮ್ ಸಾಬ್, ನಿಮ್ದು ಮನ್ಯಾಗಿನಾ ಹಳೆ ಸೀರಿ, ಹಳೆ ಪ್ಯಾಂಟ್, ಹಳೆ ಅಂಗಿ, ಹಳೆ ಲುಂಗಿ ಕೊಟ್ಟು ಬಾಣಲೆ ಸಾಮಾನು ಖರೀದಿಸುವ ಕಾಲ ಹೋಗೈತೆ. ಅಂಥ ಹಳೆ ಬಟ್ಟೆಯನ್ನು ನಮ್ಗೆ ಕೊಡ್ರಿ, ನಾವು ಹೊಸ ಜಮುಖಾನ, ಹೊಸ ಕಾರ್ಪೆಟ್ ಕೊಡ್ತೀವ್’ ಎಂದ. ಅಚ್ಚರಿಯಾದರೂ ಆತನ ಮಾತು ಸತ್ಯವಾಗಿತ್ತು. ಈಗ ಮಳೆಗಾಲ, ಚಳಿಗಾಲದಲ್ಲಿ ಅಲ್ಮೆರಾದಲ್ಲಿ ರಾಶಿ ರಾಶಿ ಬಿದ್ದಿರುವ ಸೀರೆಗಳನ್ನು ಸೇಲ್‌ಗೆ ಹಾಕುವ ಹಾಗಿಲ್ಲ. ಬಡವರಿಗಾದ್ರೂ ನೀಡೋಣ ಅಂದ್ರೆ... ಅವರೂ ಹಳೆಯವು ಎಂದು ಮುಖ ಸೊಟ್ಟ ಮಾಡುವವರೇ ಹೆಚ್ಚು. ಅದರ ಬದಲಿಗೆ ಯೋಗಿ ರಾಜ್ಯದ ಈ ವ್ಯಾಪಾರಿಗೆ ಕೊಟ್ಟು ಹಳೆಯ ಸೀರೆಗಳ ಕ್ಲಿಯರೆನ್ಸ್ ಸೇಲ್ ಮಾಡಬಹುದಲ್ಲವೇ ಎಂದೆನಿಸಿತು.

ಹಳೆ ಬಟ್ಟೆಗೆ ಹೊಸ ಬಟ್ಟೆ ಕೊಡುವ ವ್ಯಾಪಾರದ ಗುಟ್ಟನ್ನು ಆ ವ್ಯಾಪಾರಿ ತಫ್ಸೀರ್‌ಗೆ ಕೇಳಿದೆ. ಅದಕ್ಕೆ ಆತ, ‘ಜನರು ಕೊಡುವ ಹಳೆಯ ಬಟ್ಟೆಗಳನ್ನು ರಾಸಾಯನಿಕಗಳಿಂದ ತೊಳೆದ ನಂತರ ಆಧುನಿಕ ಯಂತ್ರಗಳಿಂದ ಅವುಗಳ ನೂಲು ತೆಗೆಯುತ್ತೇವೆ. ನಂತರ ನೂಲನ್ನು ಬಣ್ಣದಲ್ಲಿ ಹಾಕಿ ನೇಯ್ದು ಬಣ್ಣ ಬಣ್ಣದ ಆಕರ್ಷಕ ನೆಲಹಾಸು, ಜಮುಖಾನ, ಹೊದಿಕೆಗಳನ್ನಾಗಿ ತಯಾರಿಸಿ ಗ್ರಾಹಕರ ಕೈಗೆಟುಕುವ ಬೆಲೆಗೆ ಮಾರುತ್ತೇವೆ’ ಎಂದ. ಒಂದು ಹಳೆಯ ಪ್ಯಾಂಟ್ ಅಥವಾ ಸೀರೆಯೊಂದಿಗೆ ₹200 ನೀಡಿದರೆ ಡಬಲ್ ಬೆಡ್ ಅಳತೆಯ ಬೆಡ್ ಸ್ಪ್ರೆಡ್, ಆಕರ್ಷಕ ನೆಲಹಾಸು ಪಡೆಯಲು ಸೀರೆಗಳೊಂದಿಗೆ ₹300 ರಿಂದ ₹600 ನೀಡಬೇಕು.

—ಸೌಮ್ಯ ಶಿಗ್ಗಾಂವಕರ್, ಹಾಸನ



### ನೀವೂ ಬರೆಯಿರಿ

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುವ ‘ನಿಮ್ಮ ಪುಟ’ ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly